ಅಥವಾ ಜೀವನಾಡಿ ಎಂದು ಖ್ಯಾತಿ ಪಡೆದ ಲೋಕಲ್ ಟ್ರೇನುಗಳಲ್ಲಿ ದಿನಕ್ಕೆ ಎಂಬತ್ತು ಲಕ್ಷಕ್ಕೂ ಹೆಚ್ಚು ಪ್ರಯಾಣಿಕರು ಅಡ್ಡಾಡುತ್ತಾರೆ. ಹಗಲು ರಾತ್ರಿಯೆನ್ನದೇ ಈ ಮಹಾನಗರಿಯಲ್ಲಿ ಪ್ರತಿ ದಿನ ಸುಮಾರು 2,500 ಟ್ರೇನುಗಳು ಚಲಿಸುತ್ತವೆ. ಎರಡು ನೂರು ಜನರ ಸಾಮರ್ಥ್ಯದ ಒಂದು ಬೋಗಿಯಲ್ಲಿ ಸುಮಾರು ಸಾವಿರ ಜನರು 'ಅಡ್ಜಸ್ಟ್' ಮಾಡಿಕೊಂಡು ಪ್ರಯಾಣಿಸುತ್ತಾರೆ. ಅವನಂಗಿಯಿಂದ ಇವನಂಗಿಗೆ ಮತ್ತೆ ಇನ್ನೊಬ್ಬನಂಗಿಗೆ ವರ್ಗಾವಣೆ ಹೊಂದುತ್ತಾ ಸಾಗುವ ಬೆವರಿನ ನದಿಯೊಂದು ಟ್ರೇನಿನಷ್ಟೇ ವೇಗದಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತದೆ. ಮೂರು ಜನ ಕೂರುವ ಸೀಟಿನಲ್ಲಿ ನಾಲ್ಕನೆಯವನೂ ಅಡ್ಡ ಕೂತು ಏಕಪೃಷ್ಠ ಪೀಠಸ್ಥನಾಗುತ್ತಾನೆ. ಎರಡು ಬೆಂಚುಗಳ ನಡುವೆ ಕಾಲಿಡುವ ಜಾಗದಲ್ಲಿ ಒಳತೂರಿಕೊಂಡು ನಿಲ್ಲುವ ಪ್ರಯಾಣಿಕರ ಮತ್ತು ಆಚೀಚೆ ದಾಟಾಡುವ ಜನರ ತಿಕಕ್ಕೆ ನಿಮ್ಮ ಮುಖ ತಿರಿದುಕೊಳ್ಳದಂತೆ ಇಟ್ಟುಕೊಳ್ಳಬೇಕಾದರೆ ಟ್ರಿಗಾನಮೆಟ್ರಿ ಮತ್ತು ಜಾಮೆಟ್ರಿಯ ನಿಮ್ಮ ಜ್ಞಾನವನ್ನು ಬಳಸಿಕೊಳ್ಳಬೇಕಾಗುತ್ತದೆ.

ಲೋಕಲ್ ಟ್ರೇನ್ ಹತ್ತುವಾಗ ಇಳಿಯುವಾಗ ನಿಲ್ಲುವಾಗ ಕೂರುವಾಗ ಅನೇಕ ಅಲಿಖಿತ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ತಪ್ಪಿದರೆ ವಕ್ರತುಂಡೋಕ್ತಿಗಳನ್ನು ಕೇಳಬೇಕಾಗುತ್ತದೆ. ಸಾಲಾ ಬೆಂಚೋದ್... ವಗೈರೆ ವಗೈರೆ 'ಗಾಲಿ'ಗಳನ್ನು ತಿನ್ನಬೇಕಾಗುತ್ತದೆ. ಈ ಬೈಗುಳಗಳ ಜಗಳ ವಿಪರೀತಕ್ಕೆ ಹೋದರೂ ಕೈ ಕೈ ಮಿಲಾಯಿಸುವ ಸಂದರ್ಭಗಳು ಕಡಿಮೆ. ಯಾಕೆಂದರೆ ಆ ಗಚ್ಚಾಗಿಚ್ಚಿಯಲ್ಲಿ ಕೈಗಳು ಅವರವರ ಸ್ವಾಧೀನದಲ್ಲಿ ಇರುವುದಿಲ್ಲವಲ್ಲ!

## 'ಇಗೋ' ಮಾರಿಬಿಡಿ

ಅಹಂಕಾರವನ್ನು ಗೆದ್ದು ಆತ್ಮಜ್ಞಾನದ ಅನುಭೂತಿ ಪಡೆಯಲು ನೀವು ಹಿಮಾಲಯ ಹತ್ತುವುದು ಬೇಕಾಗಿಲ್ಲ. ಪೀಕ್ ಅವರ್‌ನಲ್ಲಿ ಒಮ್ಮೆ ಮುಂಬೈ ಲೋಕಲ್ ಟ್ರೇನಿನಲ್ಲಿ ಅಡ್ಡಾಡಿದರೆ ಸಾಕು. ಬರೀ ಹತ್ತು ರೂಪಾಯಿನಲ್ಲಿ ನಿಮಗೆ ಇಂಥ ಆತ್ಮಜ್ಞಾನ ಸಿದ್ಧಿಸುತ್ತದೆ. ಹನ್ನೆರಡು ಡಬ್ಬಿಗಳ ಈ ಲೋಕಲ್ ಟ್ರೇನುಗಳು ಹಲವು ನಂಬಿಕೆಗಳನ್ನೂ ಹಲವು ಪಂಥಗಳನ್ನೂ ತಾನು ಮೇಲೆಂಬ ಅಹಂಕಾರವನ್ನೂ ಕೀಳೆಂಬ ಕೀಳರಿಮೆಯನ್ನೂ ಸಪಾಟು ಮಾಡಿಬಿಡುತ್ತವೆ. ನಾನು ನನ್ನದು ಎನ್ನುವ ಈ ಶರೀರವು ಸರ್ವ ದಿಕ್ಕಿನಿಂದಲೂ ಸುತ್ತುವರಿದ ಅನ್ಯ ದೇಹಗಳೊಂದಿಗೆ ಅನುಸಂಧಾನ ನಡೆಸಿ ಭೌತಿಕ ಆಯಾಮದಲ್ಲಿ ವಿಶ್ವಪ್ರಜ್ಞೆಯ ಅರಿವನ್ನು ಮೂಡಿಸುತ್ತದೆ! ನಾವೆಲ್ಲ ಬೆವರು ಸ್ವರೂಪಿಗಳು, ಆತ್ಮಸ್ವರೂಪಿಗಳು ಎನ್ನುವ ಸಾಕ್ಷಾತ್ಕಾರವಾಗುತ್ತದೆ!

ಮುಂಬಯಿ ಕನ್ನಡ ಸಂಘವೊಂದರ ಕಾರ್ಯಕ್ರಮಕ್ಕೆ ನಾಡಿನ ಹೆಸರಾಂತ ಸಾಹಿತಿಯೊಬ್ಬರು ಅತಿಥಿಗಳಾಗಿ ಬಂದಿದ್ದರಂತೆ. ಖ್ಯಾತರಾದ್ದರಿಂದ ಹಲವು ಸಂಘ ಸಂಸ್ಥೆಗಳು ಅವರಿಗೆ ಫಲಪುಷ್ಪಗಳನ್ನಿತ್ತು ಗೌರವಿಸಿದವು. ಕಾರ್ಯಕ್ರಮ ಮುಗಿದ ಮೇಲೆ ಸನ್ಮಾನ್ಯರಿಗೆ ಲೋಕಲ್ ಟ್ರೇನು ಹತ್ತುವ ಆಸೆಯಾಯಿತು. ಸರಿ, ಹೆಗಲ ಮೇಲೆ ಏಳೆಂಟು ಶಾಲುಗಳು ಕೈಯಲ್ಲಿ ಹತ್ತಾರು ಗಂಧದ ಹಾರಗಳನ್ನು ಹಿಡಿದುಕೊಂಡೇ ಟ್ರೇನು ಹತ್ತಿದರಂಬುದಾಯ್ತು. ಲೋಕಲ್ ಟ್ರೇನುಗಳಲ್ಲಿ ರಶ್ ಕಡಿಮೆಯಿರುವ ಸಮಯದಲ್ಲಿ ಬಗೆಬಗೆಯ ಐಟಂಗಳನ್ನು ಮಾರುವವರ ವ್ಯಾಪಾರ ಜೋರಾಗಿರುತ್ತದೆ. ಘನ ಸಾಹಿತಿಗಳನ್ನೂ ಮಾರಾಟಕ್ಕೆ ಬಂದವನೆಂದು ತಿಳಿದು ಪ್ರಯಾಣಿಕನೊಬ್ಬ 'ಭೆಜ್ನಾ ಹೈ ಕ್ಯಾ? ಕಿತನೇಕಾ ಹೈ ಬೈ?' (ಮಾರೋದಾ? ಬೆಲೆಯೆಷ್ಟು?) ಎಂದು ಚೌಕಶಿಗಿಳಿದಾಗ ಸನ್ಮಾನ್ಯರು ಕೆಂಪು ಕೆಂಪಾದರಂತೆ!